ಬೆಳಕಿನ ಹಿಂದೆ

# ಪಟಾಕಿ ಸಮಯ

■ ಎ. ರಾಮು



ಮುರುಕು ಗೋಡೆ, ಬಿರಿದ ಬದುಕು: ದೀಪಾವಳಿ ಸಡಗರಕ್ಕೆ ಸಿದ್ಧವಾಗುತ್ತಿರುವ ರಂಗುರಂಗಿನ ಸುಡುಮದ್ದುಗಳು!

## ಸುಡುಮದ್ದು ಬೆಳಕಿನಲ್ಲಿ ಎಷ್ಟೊಂದು ಮುಖ!



ಪಟಾಕಿಗಳು ಠುಸ್ ಎನ್ನದಿರಲೆಂದು, ಬಿಸಿಲಿನಲ್ಲಿ ಒಣಗಿ ಗರಿಗರಿಯಾಗುತ್ತಿವೆ...

ನರಕ ಚತುರ್ದಶಿ, ಲಕ್ಷ್ಮೀಪೂಜೆ, ಬಲಿಪಾಡ್ಯಮಿ– ಮೂರು ದಿನಗಳ ದೀಪಾವಳಿ ಹಬ್ಬದ ಸಂಭ್ರಮದ ಬೆಳಕನ್ನು ಮತ್ತಷ್ಟು ತೀವ್ರವಾಗಿಸುವುದು ಪಟಾಕಿಗಳ ಸದ್ದುಗದ್ದಲ. ಪಟಾಕಿ ಸಿಡಿಸುವುದೆಂದರೆ ಸಂಭ್ರಮವನ್ನು ಹೆಚ್ಚಿಸುವುದು ಎಂದರ್ಥ. ಪಟಾಕಿಯ ಸದ್ದು ನಮ್ಮ ಉತ್ಸಾಹವನ್ನು ಹೆಚ್ಚಿಸುತ್ತದೆ. ಬೆಳಕು ಕತ್ತಲೆಯನ್ನು ಚೆಲ್ಲಾಪಿಲ್ಲಿಯಾಗಿಸುವ ರೂಪಕ. ಸುರ್ ಸುರ್ ಬತ್ತಿ, ಹೂಕುಂಡಗಳು ಬಿಡಿಸುವ ಬೆಳಕಿನ ಚಿತ್ತಾರಗಳು ದೀಪಾವಳಿಯ ಮೆರುಗನ್ನು ವರ್ಧಿಸುವ ಚಿನ್ನದಮರಿಗಳು. ಆದರೆ, ಇಷ್ಟೆಲ್ಲ ಬೆಳಕು–ವರ್ಣ ವಿಲಾಸದ ಹಿಂದೆ ಮತ್ತೊಂದು ರೂಪವೂ ಇದೆ. ಅದು, ಪಟಾಕಿ ತಯಾರಿಸುವ ಕಾರ್ಮಿಕರ ಬದುಕಿನ ತಲ್ಲಣಗಳು ಹಾಗೂ ಪರಿಸರ



ಪಟಾಕಿಯ ಮದ್ದು ಮೆತ್ತಿಕೊಂಡಿರುವ ಕೈಗಳನ್ನು ನೋಡಿದರೆ, ಪಟಾಕಿ ಹಚ್ಚಲು ಮನಸ್ಸು ಬಂದೀತೆ?